# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

**"ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಪತ್ರ"**

**ವಿಷಯ :** ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಚಿಕ್ಕಜಾಲ ಗ್ರಾಮದ ಸ.ನಂ 77/6 ರಲ್ಲಿ 1ಎ-04ಗು 77/7 ರಲ್ಲಿ 0ಎ-22ಗು, 77/9 ರಲ್ಲಿ 0ಎ-29ಗು, 77/15 ರಲ್ಲಿ 0ಎ-22ಗು, 77/16 ರಲ್ಲಿ 0ಎ-22ಗು, 77/17 ರಲ್ಲಿ 0ಎ-22ಗು, 77/3ಎ ರಲ್ಲಿ 0ಎ-19ಗು, 77/3ಬಿ ರಲ್ಲಿ 0ಎ-19ಗು, 77/4 ರಲ್ಲಿ 2ಎ-34ಗು, 77/5ರಲ್ಲಿ 1ಎ-09ಗು, 78/8 ರಲ್ಲಿ 0-10ಗು, 78/10ಎ1 ರಲ್ಲಿ 0-15ಗು, 78/10ಬಿ ರಲ್ಲಿ 0-02ಗು ಒಟ್ಟು 9ಎ-29ಗು ಅಥವಾ 39355.13 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ವಾಣಿಜ್ಯ / ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ.

**ಉಲ್ಲೇಖ :**

1) ಶ್ರೀಮತಿ ಆರ್.ಪದ್ಮಾ ಕೋಂ ರಾಮಚಂದ್ರ, ಶ್ರೀ ಎಂ.ರಾಮಚಂದ್ರ, ಶ್ರೀ ಆರ್.ಮಂಜು, ಶ್ರೀ ಜಿ.ಕೆ.ಸಂಪತ್ ಬಿನ್ ಕುಪ್ಪಸ್ವಾಮಿರೆಡ್ಡಿ, ಶ್ರೀಮತಿ ಕೆ.ಲತಾ ಕೋಂ ರಮೇಶ್, ಶ್ರೀ ಪಿ.ಗೋಪಾಲಕೃಷ್ಣ ಬಿನ್ ರಾಮಕೃಷ್ಣ ನಾಯ್ಡು, ಶ್ರೀಮತಿ ರತ್ನಮ್ಮ ಕೋಂ ರಾಮಕೃಷ್ಣಯ್ಯ, ಶ್ರೀಮತಿ ಸಿ.ರತ್ನಮ್ಮ ಬಿನ್ ಲೇ॥ ಚನ್ನಪ್ಪ ಇವರುಗಳ ಪರವಾಗಿ ಎಂ.ಒ.ಯುದಾರರಾದ ಶ್ರೀ ಸಿ.ಆರ್.ಸುರೇಶ್ ಬಿನ್ ರಾಮಕೃಷ್ಣಪ್ಪ ರವರುಗಳ ಅರ್ಜಿ ಸಂಖ್ಯೆ 3329, ದಿನಾಂಕ: 25/05/2019.
2) ಸರ್ಕಾರದ ಆದೇಶ ಸಂ. ನಅಇ28ಬಿಎಂಆರ್2018 ಬೆಂಗಳೂರು. ದಿನಾಂಕ: 29/05/2018 &. ನಅಇ73ಬಿಎಂಆರ್2018 ಬೆಂಗಳೂರು ದಿನಾಂಕ: 29/05/2018
3) ಈ ಪ್ರಾಧಿಕಾರದ ಭೂಉಪಯೋಗ ಬದಲಾವಣೆ ಆದೇಶ ಸಂಖ್ಯೆ: ಬಿಐಎಪಿಎ/ಟಿಪಿ/ಭೂಉಬ/18/2016-17/1270, ದಿ:22/09/2018 ಮತ್ತು ಬಿಐಎಪಿಎ/ಟಿಪಿ2/ಭೂಉಬ/19/ 2017-18/1753, ದಿ:20/11/2018.
4) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಕಛೇರಿ ಅಧಿಕೃತ ಜ್ಞಾಪನ ಪತ್ರಗಳ ಸಂ: ಎಎಲ್‌ಎನ್/(ಜಾಲ)ಇತರೆ ಎಸ್.ಆರ್ 05/2018-19 ಸಿ.ಡಬ್ಲ್ಯೂ ಎಎಲ್‌ಎನ್/ಎಸ್‌ಆರ್(ಎನ್‌ಎ) 210/2004-05 ದಿನಾಂಕ: 31.07.2019 (77/3ಎ, 77/3ಬಿ), ಎಎಲ್‌ಎನ್/(ಜಾಲ)ಇತರೆ ಎಸ್.ಆರ್ 07/2018-19 ಸಿ.ಡಬ್ಲ್ಯೂ ಎಎಲ್‌ಎನ್/ಎಸ್‌ಆರ್(ಎನ್‌ಎ) 536/2004-05 ದಿನಾಂಕ: 31.07.2019 (77/4), ಎಎಲ್‌ಎನ್/ (ಜಾಲ)ಇತರೆ ಎಸ್.ಆರ್ 06/2018-19, ಸಿ.ಡಬ್ಲ್ಯೂ ಎಎಲ್‌ಎನ್/ಎನ್‌ಎ (ಜಾಲ) ಎಸ್‌ಆರ್ 42/2012-13 ದಿನಾಂಕ: 31.07.2019 (77/4), ಎಎಲ್‌ಎನ್/ (ಜಾಲ)ಇತರೆ ಎಸ್.ಆರ್ 01/2018-19 ಸಿ.ಡಬ್ಲ್ಯೂ ಎಎಲ್‌ಎನ್/ಎಸ್‌ಆರ್(ಎನ್‌ಎ) 100/2006-07 ದಿನಾಂಕ: 16.09.2019 (77/5), ಎಎಲ್‌ಎನ್/ (ಜಾಲ)ಇತರೆ ಎಸ್.ಆರ್ 24/2018-19, ಬಿಡಿಎಸ್/ಎಎಲ್‌ಎನ್/ಎಸ್‌ಆರ್ (ಎನ್‌ಎ)211/2004-05 ದಿನಾಂಕ: 28.05.2019 (77/6), ಎಎಲ್‌ಎನ್/ (ಜಾಲ)ಎಸ್.ಆರ್ 06/2016-17 ದಿನಾಂಕ: 23.10.2017 (77/7), ಎಎಲ್‌ಎನ್/ (ಜಾಲ)ಇತರೆ ಎಸ್.ಆರ್ 23/2018-19, ಬಿಡಿಎಸ್/ಎಎಲ್‌ಎನ್/ಎಸ್‌ಆರ್ (ಎನ್‌ಎ)23/2003-04 ದಿನಾಂಕ: 28.05.2019 (77/9), ಎಎಲ್‌ಎನ್/ (ಜಾಲ)ಇತರೆ ಎಸ್.ಆರ್ 20/2018-19, ಎಎಲ್‌ಎನ್ (ಜಾಲ) ಎಸ್‌ಆರ್ 07/2016-17 ದಿನಾಂಕ: 28.05.2019 (77/15), ಎಎಲ್‌ಎನ್/ (ಜಾಲ)ಇತರೆ ಎಸ್.ಆರ್ 42/2018-19 ಎಎಲ್‌ಎನ್/(ಜಾಲ)ಎಸ್‌ಆರ್ 74/15-16 ದಿನಾಂಕ: 28.05.2019 (77/16), ಎಎಲ್‌ಎನ್/ (ಜಾಲ)ಇತರೆ ಎಸ್.ಆರ್ 22/2018-19 ಎಎಲ್‌ಎನ್/(ಜಾಲ)ಎಸ್‌ಆರ್37/16-17 ದಿನಾಂಕ:28.05.2019 (77/17), ಎಎಲ್‌ಎನ್/ (ಜಾಲ)ಇತರೆ ಎಸ್.ಆರ್ 03/2018-19 ಸಿ.ಡಬ್ಲ್ಯೂ ಎಎಲ್‌ಎನ್/ಎಸ್‌ಆರ್ (ಎನ್‌ಎ) 34/2003-04 ದಿನಾಂಕ: 31.07.2019 (78/8), ಎಎಲ್‌ಎನ್/ (ಜಾಲ)ಇತರೆ ಎಸ್.ಆರ್ 04/2018-19 ಸಿ.ಡಬ್ಲ್ಯೂ ಎಎಲ್‌ಎನ್/ಎಸ್‌ಆರ್ (ಎನ್‌ಎ)67/2003-04 ದಿನಾಂಕ:

31.07.2019 (78/10ಎ1), LAND10019510 ದಿನಾಂಕ: 01.10.2019 (78/10ಬಿ).

5) ದಿನಾಂಕ: 01/06/2019 ರಂದು ನಡೆದ ಪ್ರಾಧಿಕಾರದ 124 ನೇ ಸಭೆಯ ವಿಷಯ ಸಂ. 124[12(1)] ರ ನಡಾವಳಿ.
6) ಈ ಪ್ರಾಧಿಕಾರದ ಸಮ ಸಂಖ್ಯೆಯ ಪತ್ರ ದಿನಾಂಕ: 16/10/2019.
7) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ 9854 ದಿನಾಂಕ: 22/01/2020 ಒಟ್ಟು 9,00,000/- (ಒಂಭತ್ತು ಲಕ್ಷ ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.
8) ಅರ್ಜಿದಾರರ ಮನವಿ ಪತ್ರ ದಿನಾಂಕ: 16/10/2020.
9) ದಿನಾಂಕ: 11/11/2020 ರಂದು ನಡೆದ ಪ್ರಾಧಿಕಾರದ 130 ನೇ ಸಭೆಯ ವಿಷಯ ಸಂ. 130.106 ರ ನಡಾವಳಿ.
10) ಅರ್ಜಿದಾರರಿಗೆ ಶುಲ್ಕ ಪಾವತಿಸಲು ತಿಳಿಸಿ ಬರೆದಿರುವ ಈ ಪ್ರಾಧಿಕಾರದ ಸಮಸಂಖ್ಯೆಯ ಶುಲ್ಕಪಾವತಿ ಸೂಚನಾ ಪತ್ರ ದಿನಾಂಕ: 15/02/2021.
11) ಅರ್ಜಿದಾರರು ಪ್ರಾಧಿಕಾರದ ರಶೀದಿ ಸಂಖ್ಯೆ: 0010777, ದಿನಾಂಕ: 26/11/2021 ರಂತೆ ರೂ. 1,59,26,500/- (ಒಂದು ಕೋಟಿ ಐವತ್ತೊಂಭತ್ತು ಲಕ್ಷದ ಇಪ್ಪತ್ತಾರು ಸಾವಿರದ ಐದುನೂರು ರೂಪಾಯಿಗಳು ಮಾತ್ರ) ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.
12) ಪ್ರಸ್ತಾಪಿತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ 18.00 ಮೀ ಅಗಲದ ಮಹಾಯೋಜನೆಯ ಪ್ರಸ್ತಾಪಿತ ರಸ್ತೆ ಪಂಕ್ತೀಕರಣದ ಪ್ರದೇಶಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಚಿಕ್ಕಜಾಲ ಗ್ರಾಮ ಪಂಚಾಯಿತಿ ರವರಿಗೆ ಹಸ್ತಾಂತರಿಸಲು ಸೂಚಿಸಿ ಬರೆದಿರುವ ಪತ್ರ ದಿನಾಂಕ: 19/02/2022.
13) ಪ್ರಸ್ತಾಪಿತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ 18.00 ಮೀ ಅಗಲದ ಮಹಾಯೋಜನೆಯ ಪ್ರಸ್ತಾಪಿತ ರಸ್ತೆ ಪಂಕ್ತೀಕರಣದ ಪ್ರದೇಶಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಚಿಕ್ಕಜಾಲ ಗ್ರಾಮ ಪಂಚಾಯಿತಿ ರವರಿಗೆ ಉಪನೋಂದಣಾಧಿಕಾರಿಗಳು, ಗಾಂಧಿನಗರ (ಜಾಲ) ರವರ ಕಛೇರಿಯ 1 ನೇ ಪುಸ್ತಕದ ದಸ್ತಾವೇಜು ನಂಬರ್ ಜೆಎಎಲ್-1-04672/2021-22 ಆಗಿ ಸಿ.ಡಿ.ನಂಬರ್ ಜೆಎಎಲ್‌ಡಿ1028 ನೇ ದ್ದರಲ್ಲಿ ದಿನಾಂಕ: 09/03/2022 ರಂದು ಹಸ್ತಾಂತರಿಸಿರುವ ಬಗ್ಗೆ ನೋಂದಾಯಿತ ಪರಿತ್ಯಾಜನಾ ಪತ್ರದ ಪ್ರತಿಯನ್ನು ಸಲ್ಲಿಸಿರುವ ಮನವಿ ಪತ್ರ ದಿನಾಂಕ: 09/03/2022.
14) ಅರ್ಜಿದಾರರ ಮನವಿ ಪತ್ರ ದಿನಾಂಕ: 22/04/2022 & 26/04/2022.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಆರ್.ಪದ್ಮಾ ಕೋಂ ರಾಮಚಂದ್ರ, ಶ್ರೀ ಎಂ.ರಾಮಚಂದ್ರ, ಶ್ರೀ ಆರ್.ಮಂಜು, ಶ್ರೀ ಜಿ.ಕೆ.ಸಂಪತ್ ಬಿನ್ ಕುಪ್ಪಸ್ವಾಮಿರೆಡ್ಡಿ, ಶ್ರೀಮತಿ ಕೆ.ಲತಾ ಕೋಂ ರಮೇಶ್, ಶ್ರೀ ಪಿ.ಗೋಪಾಲಕೃಷ್ಣ ಬಿನ್ ರಾಮಕೃಷ್ಣ ನಾಯ್ಡು, ಶ್ರೀಮತಿ ರತ್ನಮ್ಮ ಕೋಂ ರಾಮಕೃಷ್ಣಯ್ಯ, ಶ್ರೀಮತಿ ಸಿ.ರತ್ನಮ್ಮ ಬಿನ್ ಲೇ॥ ಚನ್ನಪ್ಪ ಇವರುಗಳ ಪರವಾಗಿ ಎಂ.ಓ.ಯುದಾರರಾದ ಶ್ರೀ ಸಿ.ಆರ್.ಸುರೇಶ್ ಬಿನ್ ರಾಮಕೃಷ್ಣಪ್ಪ ಇವರು ಉಲ್ಲೇಖ (1) ರಂತೆ ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಚಿಕ್ಕಜಾಲ ಗ್ರಾಮದ ಸ.ನಂ 77/6 ರಲ್ಲಿ 1ಎ-04ಗು, 77/7 ರಲ್ಲಿ 0ಎ-22ಗು, 77/9 ರಲ್ಲಿ 0ಎ-29ಗು, 77/15 ರಲ್ಲಿ 0ಎ-22ಗು, 77/16 ರಲ್ಲಿ 0ಎ-22ಗು, 77/17 ರಲ್ಲಿ 0ಎ-22ಗು ಒಟ್ಟು 4ಎ-01ಗು ವಿಸ್ತೀರ್ಣದ ಜಮೀನುಗಳಲ್ಲಿ ವಾಣಿಜ್ಯ ಉಪಯೋಗದ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಿರುತ್ತಾರೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆ-2021 ರಂತೆ ಪ್ರಸ್ತಾಪಿತ ಜಮೀನುಗಳು ವಸತಿ, ಭಾಗಶಃ ವಾಣಿಜ್ಯ ಭೂಉಪಯೋಗ ವಲಯ ಹಾಗೂ ಮಹಾಯೋಜನೆಯ ಪ್ರಸ್ತಾಪಿತ 18.00 ಮೀ ಅಗಲದ ರಸ್ತೆ ಪಂಕ್ತೀಕರಣದಲ್ಲಿ ಇರುತ್ತದೆ. ಉಲ್ಲೇಖ (2) ರ ಸರ್ಕಾರದ ಆದೇಶದಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರಡಿಯಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆಯಾಗಿರುತ್ತದೆ. ಅದರಂತೆ ಉಲ್ಲೇಖ (3) ರಲ್ಲಿ ಈ ಪ್ರಾಧಿಕಾರದಿಂದ ಭೂಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಆದೇಶ ಪತ್ರ

**ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ**

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

ನೀಡಲಾಗಿರುತ್ತದೆ. ಉಲ್ಲೇಖ (4) ರ ಅಧಿಕೃತ ಜ್ಞಾಪನ ಪತ್ರಗಳಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರಿಂದ ವಾಣಿಜ್ಯ/ ರಸ್ತೆ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿರುತ್ತದೆ.

ಪ್ರಸ್ತಾವಿತ ವಾಣಿಜ್ಯ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (5) ರಲ್ಲಿನ ದಿನಾಂಕ: 01/06/2019 ರಂದು ನಡೆದ ಪ್ರಾಧಿಕಾರದ 124 ನೇ ಸಭೆಯ ವಿಷಯ ಸಂ. 124[12(1)] ರ ನಡಾವಳಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ 2015 ರನ್ವಯ ಹಾಗೂ ವಲಯ ನಿಯಮಾವಳಿಯನ್ವಯ "ವಾಣಿಜ್ಯ" ಉಪಯೋಗದ ಏಕ ನಿವೇಶನ ವಿನ್ಯಾಸ ನಕ್ಷೆಗೆ ನಿಗಧಿತ ಶುಲ್ಕಗಳನ್ನು ಪಾವತಿಸಿಕೊಂಡು ಹಾಗೂ ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಉಲ್ಲೇಖ (6) ರ ಪ್ರಾಧಿಕಾರದ ಪತ್ರದಲ್ಲಿ ಅರ್ಜಿದಾರರಿಗೆ ನಿಗಧಿತ ಶುಲ್ಕಗಳನ್ನು ಪಾವತಿಸುವಂತೆ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರಂತೆ ಅರ್ಜಿದಾರರು ಉಲ್ಲೇಖ (7) ರಲ್ಲಿ ಈ ಪ್ರಾಧಿಕಾರಕ್ಕೆ ನಿಗಧಿತ ಶುಲ್ಕಗಳನ್ನು ಪಾವತಿಸಿರುತ್ತಾರೆ. ಆದರೆ ಸದರಿ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದುಕೊಂಡಿರುವುದಿಲ್ಲ.

ಶ್ರೀಮತಿ/ಶ್ರೀಯುತರುಗಳಾದ ಸಿ.ರತ್ನಮ್ಮ, ವಿಜಯಲಕ್ಷ್ಮಿ ಡಿ.ಎಸ್, ಕೆ.ಲತಾ, ರಾಮಚಂದ್ರ ಎಂ, ಆರ್.ಮಂಜು, ಆರ್.ಪದ್ಮ, ಪಿ.ಗೋಪಾಲಕೃಷ್ಣ, ಹೇಮಂತ್, ಸಿ.ಆರ್. ಸುರೇಶ್, ರತ್ನಮ್ಮ ಕೋಂ ರಾಮಕೃಷ್ಣಪ್ಪ, ಸಿ.ಎನ್ ಅಶೋಕ್, ಸಿ.ಎನ್. ರಮೇಶ್, ಜಿ.ಎ.ಸಂಪತ್ ರವರುಗಳು ಉಲ್ಲೇಖ (8) ರ ಮನವಿ ಪತ್ರದಲ್ಲಿ ಈ ಹಿಂದೆ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಕೋರಲಾಗಿರುವ ಪ್ರದೇಶಕ್ಕೆ ಹೆಚ್ಚುವರಿಯಾಗಿ ಚಿಕ್ಕಜಾಲ ಗ್ರಾಮದ ಸ.ನಂ. 77/3ಎ ರಲ್ಲಿ 0ಎ-19ಗು, 77/3ಬಿ ರಲ್ಲಿ 0ಎ-19ಗು, 77/4 ರಲ್ಲಿ 2ಎ-34ಗು, 77/5ರಲ್ಲಿ 1ಎ-09ಗು, 78/8 ರಲ್ಲಿ 0-10ಗು, 78/10ಎ1 ರಲ್ಲಿ 0-15ಗು, 78/10ಬಿ ರಲ್ಲಿ 0-02ಗು, ಒಟ್ಟು 5ಎ-28ಗು ಸೇರಿಸಿಕೊಂಡು ಒಟ್ಟಾರೆಯಾಗಿ 9ಎ-29ಗು ಅಥವಾ 39355.13 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ವಾಣಿಜ್ಯ / ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ.

ಉಲ್ಲೇಖ (9) ರಲ್ಲಿನ ದಿನಾಂಕ: 11/11/2020 ರಂದು ನಡೆದ ಪ್ರಾಧಿಕಾರದ 130 ನೇ ಸಭೆಯ ವಿಷಯ ಸಂ. 130.106 ರ ನಡಾವಳಿಯಲ್ಲಿ ಅಭಿವೃದ್ಧಿ ನಕ್ಷೆಯಲ್ಲಿ ಸೂಚಿಸಲಾದ ಬಯಲುಜಾಗ ಮತ್ತು ಉದ್ಯಾನವನ ಪ್ರದೇಶಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಿಕೊಂಡು ಹಾಗೂ 77/15 ರಲ್ಲಿ 0ಎ-10ಗು ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆಗೊಂಡಿದ್ದು, ವಾಣಿಜ್ಯ ಉದ್ದೇಶಕ್ಕಾಗಿ ಉದ್ದೇಶ ಬದಲಾವಣೆ ಬಗ್ಗೆ ಕಂದಾಯ ಇಲಾಖೆಯಿಂದ ಮಾರ್ಪಡಿತ ಭೂಪರಿವರ್ತನಾ ಆದೇಶ ಪಡೆದು ವಲಯನಿಯಮಾವಳಿಗಳ ಪ್ರಕಾರ ತಿದ್ದುಪಡಿ ನಕ್ಷೆಯನ್ನು ಪಡೆದು ಈ ಹಿಂದೆ ದಿನಾಂಕ: 01/06/2019 ರಂದು ನಡೆದ ಪ್ರಾಧಿಕಾರದ 124ನೇ ಸಭೆಯ ವಿಷಯ ಸಂಖ್ಯೆ: 124[12(1)] ರ ನಡಾವಳಿಯಲ್ಲಿ ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಚಿಕ್ಕಜಾಲ ಗ್ರಾಮದ ಸ.ನಂ 77/6 ರಲ್ಲಿ 1ಎ-04ಗು 77/7 ರಲ್ಲಿ 0ಎ-22ಗು, 77/9 ರಲ್ಲಿ 0ಎ-29ಗು, 77/15 ರಲ್ಲಿ 0ಎ-22ಗು, 77/16 ರಲ್ಲಿ 0ಎ-22ಗು, 77/17 ರಲ್ಲಿ 0ಎ-22ಗು ಒಟ್ಟು 4ಎ-01ಗು ವಿಸ್ತೀರ್ಣ ಪ್ರದೇಶಕ್ಕೆ ಅನುಮೋದಿಸಲು ನಿರ್ಣಯಿಸಲಾಗಿರುವುದನ್ನು ರದ್ದುಪಡಿಸಿ, ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಚಿಕ್ಕಜಾಲ ಗ್ರಾಮದ ಸ.ನಂ 77/6 ರಲ್ಲಿ 1ಎ-04ಗು 77/7 ರಲ್ಲಿ 0ಎ-22ಗು, 77/9 ರಲ್ಲಿ 0ಎ-29ಗು, 77/15 ರಲ್ಲಿ 0ಎ-22ಗು, 77/16 ರಲ್ಲಿ 0ಎ-22ಗು, 77/17 ರಲ್ಲಿ 0ಎ-22ಗು, 77/3ಎ ರಲ್ಲಿ 0ಎ-19ಗು, 77/3ಬಿ ರಲ್ಲಿ 0ಎ-19ಗು, 77/4 ರಲ್ಲಿ 2ಎ-34ಗು, 77/5ರಲ್ಲಿ 1ಎ-09ಗು, 78/8 ರಲ್ಲಿ 0-10ಗು, 78/10ಎ1 ರಲ್ಲಿ 0-15ಗು, 78/10ಬಿ ರಲ್ಲಿ 0-02ಗು ಒಟ್ಟು 9ಎ-29ಗು ಅಥವಾ 39355.13 ಚ.ಮೀ ವಿಸ್ತೀರ್ಣದ ಜಮೀನಿನಲ್ಲಿ ವಾಣಿಜ್ಯ /ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಉಲ್ಲೇಖ (10) ರ ಪ್ರಾಧಿಕಾರದ ಪತ್ರದಲ್ಲಿ ಅರ್ಜಿದಾರರಿಗೆ ನಿಗಧಿತ ಶುಲ್ಕಗಳನ್ನು ಪಾವತಿಸುವಂತೆ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರಂತೆ ಅರ್ಜಿದಾರರು ಉಲ್ಲೇಖ (11) ರಲ್ಲಿ ಈ ಪ್ರಾಧಿಕಾರಕ್ಕೆ ನಿಗಧಿತ ಶುಲ್ಕಗಳನ್ನು ಪಾವತಿಸಿರುತ್ತಾರೆ.

ಉಲ್ಲೇಖ (12) ರ ಯೋಜನಾ ಪ್ರಾಧಿಕಾರದ ಪತ್ರದಲ್ಲಿ ಪ್ರಸ್ತಾಪಿತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ 18.00 ಮೀ ಅಗಲದ ಮಹಾಯೋಜನೆಯ ಪ್ರಸ್ತಾಪಿತ ರಸ್ತೆ ಪಂಕ್ತೀಕರಣದ ಪ್ರದೇಶಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಚಿಕ್ಕಜಾಲ ಗ್ರಾಮ ಪಂಚಾಯಿತಿ ರವರಿಗೆ ಹಸ್ತಾಂತರಿಸಲು ಸೂಚಿಸಲಾಗಿತ್ತು. ಅರ್ಜಿದಾರರು ಉಲ್ಲೇಖ (13) ರ ಮನವಿ ಪತ್ರದಲ್ಲಿ ಪ್ರಸ್ತಾಪಿತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ 18.00 ಮೀ ಅಗಲದ ಮಹಾಯೋಜನೆಯ ಪ್ರಸ್ತಾಪಿತ ರಸ್ತೆ

ಪಂಕ್ತೀಕರಣದ ಪ್ರದೇಶಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಚಿಕ್ಕಜಾಲ ಗ್ರಾಮ ಪಂಚಾಯಿತಿ ರವರಿಗೆ ನೋಂದಾಯಿಸಿರುವ ಬಗ್ಗೆ ಪರಿತ್ಯಾಜನಾ ಪತ್ರದ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (14) ರ ದಿನಾಂಕ: 22/04/2022 & 26/04/2022 ರ ಮನವಿ ಪತ್ರಗಳಲ್ಲಿ ಸ.ನಂ 77/16 ರಲ್ಲಿ 0ಎ–22ಗು ವಿಸ್ತೀರ್ಣ ಪ್ರದೇಶದ ಜಮೀನು ಶ್ರೀ ಜಿ.ಕೆ.ಸಂಪತ್‌ರವರಿಂದ M/s Artismo ರವರಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾಲೀಕತ್ವ ಬದಲಾವಣೆಗೊಂಡಿರುತ್ತದೆ. ಅಲ್ಲದೇ 77/6 ರಲ್ಲಿ 0ಎ–21, 77/7 ರಲ್ಲಿ 0ಎ–22ಗು, 77/15 ರಲ್ಲಿ 0ಎ–22ಗು, 77/17 ರಲ್ಲಿ 0ಎ–22ಗು, 77/9 ರಲ್ಲಿ 0ಎ–29ಗು ವಿಸ್ತೀರ್ಣ ಪ್ರದೇಶದ ಜಮೀನುಗಳನ್ನು ಭೂಮಾಲೀಕರಾದ ಶ್ರೀಮತಿ ವಿಜಯಲಕ್ಷ್ಮಿ ಡಿ.ಎಸ್, ಶ್ರೀಮತಿ ರತ್ನಮ್ಮ.ಸಿ, ಶ್ರೀಮತಿ ಕೆ.ಲತಾ, ಶ್ರೀ ರಾಮಚಂದ್ರ ಎಂ, ಶ್ರೀ ಮಂಜು.ಆರ್, ಶ್ರೀಮತಿ ಆರ್ ಪದ್ಮ, ಶ್ರೀ ಆರ್ ಗೋಪಾಲಕೃಷ್ಣ.ಸಿ ರವರುಗಳು M/s Artismo ರವರಿಗೆ ನೋಂದಾಯಿತ ಪವರ್ ಆಫ್ ಅಟಾರ್ನಿ ಪತ್ರದ ಮೂಲಕ ನೋಂದಾಯಿಸಿರುವುದರಿಂದ M/s Artismo ರವರ ಹೆಸರಿಗೆ ಅನುಮೋದನೆ ನೀಡಲು ಕೋರುತ್ತಾ ಅಗತ್ಯ ದಾಖಲೆಗಳನ್ನು ಹಾಗೂ ಅಭಿವೃದ್ಧಿ ಯೋಜನಾ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಮೇಲ್ಕಂಡ ಅಂಶಗಳನ್ವಯ ಸದರಿ ವಾಣಿಜ್ಯ / ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಕೆಳಕಂಡಂತೆ ಆದೇಶಿಸಿದೆ.

## ಆದೇಶ

**ಸಂ. ಬಿಐಎಎಪಿಎ/ಟಿಪಿ02/ಡಿಪಿ/01/2019–20** 468 **ದಿನಾಂಕ:** 12 MAY 2022

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಚಿಕ್ಕಜಾಲ ಗ್ರಾಮದ ಸ.ನಂ 77/6 ರಲ್ಲಿ 1ಎ–04ಗು 77/7 ರಲ್ಲಿ 0ಎ–22ಗು, 77/9 ರಲ್ಲಿ 0ಎ–29ಗು, 77/15 ರಲ್ಲಿ 0ಎ–22ಗು, 77/16 ರಲ್ಲಿ 0ಎ–22ಗು, 77/17 ರಲ್ಲಿ 0ಎ–22ಗು, 77/3ಎ ರಲ್ಲಿ 0ಎ–19ಗು, 77/3ಬಿ ರಲ್ಲಿ 0ಎ–19ಗು, 77/4 ರಲ್ಲಿ 2ಎ–34ಗು, 77/5ರಲ್ಲಿ 1ಎ–09ಗು, 78/8 ರಲ್ಲಿ 0–10ಗು, 78/10ಎ1 ರಲ್ಲಿ 0–15ಗು, 78/10ಬಿ ರಲ್ಲಿ 0–02ಗು ಒಟ್ಟು 9ಎ–29ಗು ಅಥವಾ 39355.13 ಚ.ಮೀ ವಿಸ್ತೀರ್ಣದ ಜಮೀನುಗಳಲ್ಲಿ ವಾಣಿಜ್ಯ /ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 15 ರನ್ವಯ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದಿಸಿದೆ.

**ಷರತ್ತುಗಳು:**

1) ಪ್ರಾಧಿಕಾರಕ್ಕೆ ಸಂಬಂಧಪಟ್ಟ ಶುಲ್ಕಗಳನ್ನು ಪಾವತಿಸುವುದು.
2) ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. ಕುಡಿಯುವ ನೀರು ಪೂರೈಕೆ ಬಗ್ಗೆ ಅರ್ಜಿದಾರರು ಖಾತ್ರಿಪಡಿಸುವುದು.
3) ಅಭಿವೃದ್ಧಿ ಯೋಜನೆಯಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಕೊಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು.
4) ಪ್ರಾಧಿಕಾರವು ಅನುಮೋದಿಸಿರುವ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ.
5) ಉದ್ಯಾನವನ ಮತ್ತು ಬಯಲು ಜಾಗಗಳನ್ನು ಹಾಗೂ ಸಿ.ಎ. ಜಾಗಗಳನ್ನು ಅನುಮೋದಿತ ನಕ್ಷೆ ಪ್ರಕಾರ ಅಭಿವೃದ್ಧಿಪಡಿಸುವುದು.
6) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು.
7) ಕಟ್ಟಡ ಕಾಮಗಾರಿ ಪ್ರಾರಂಭವಾದ ನಂತರ ಕಟ್ಟಡ ಸುರಕ್ಷತೆಯ ಬಗ್ಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ಪರಿಶೀಲಿಸಿಕೊಳ್ಳತಕ್ಕದ್ದು.
8) ವಿವರವಾದ ಕಟ್ಟಡ ನಕ್ಷೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15ರ ಅಡಿಯಲ್ಲಿ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು.

9) ವಲಯ ನಿಯಮಾವಳಿಯಂತೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯು ಉದ್ದೇಶಿತ ಕಟ್ಟಡಗಳ ಬ್ಲಾಕ್‌ಗಳು, ಉಪಗಮನ ರಸ್ತೆ, ಹೈವೇಗಳು, ಉದ್ಯಾನವನ ಮತ್ತು ಖಾಲಿ ಜಾಗಗಳು, ನಾಗರೀಕ ಸೌಕರ್ಯ ಜಾಗಗಳನ್ನು ನಿಗದಿಪಡಿಸಿರುವ ನಕ್ಷೆಯಾಗಿದ್ದು ಎಲ್ಲಾ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಕಟ್ಟಡ ನಕ್ಷೆ ಅನುಮೋದಿಸುವ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.

10) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ–2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

11) ನೈರುತ್ಯ ರೈಲ್ವೆ ಇಲಾಖೆಯ ಪತ್ರ ಸಂಖ್ಯೆ ಬಿ/ಡಬ್ಲ್ಯೂ–278/ಎನ್‌ಒಸಿ/ಮೆ॥ ತ್ರಿನಯನಿ ರಿಯಾಲ್ಟರ್ಸ್ ಪ್ರೈ ಲಿ., / 23, ದಿನಾಂಕ: 15/03/2021 ರ ನಿರಾಕ್ಷೇಪಣಾ ಪತ್ರದಲ್ಲಿನ ಎಲ್ಲಾ ಷರತ್ತುಗಳನ್ನು ಅರ್ಜಿದಾರರು ಕಡ್ಡಾಯವಾಗಿ ಪಾಲಿಸುವ ಷರತ್ತಿಗೊಳಪಟ್ಟಿರುತ್ತದೆ.

12) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು constent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ. ಉದ್ದೇಶಿತ ಕಟ್ಟಡ / ನೆಲ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ constent for Establishment ಅನುಮತಿ ಪಡೆಯತಕ್ಕದ್ದು.

13) ಪ್ರಸ್ತಾವಿತ ಬಡಾವಣೆಯಲ್ಲಿನ ನಿವೇಶನದಾರರಿಗೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ಬಡಾವಣೆಯ ಮಾಲೀಕರು ಒದಗಿಸತಕ್ಕದ್ದು.

14) ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಪೂರ್ವದಲ್ಲಿ ಅಗತ್ಯ ಅಭಿವೃದ್ಧಿ ಶುಲ್ಕವನ್ನು ಯೋಜನಾ ಪ್ರಾಧಿಕಾರಕ್ಕೆ/ಸ್ಥಳೀಯ ಸಂಸ್ಥೆಗೆ ಪಾವತಿಸತಕ್ಕದ್ದು.

15) ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ಥೆಯಲ್ಲಿ ಅಡಚಣೆಯುಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು, ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸುವುದು.

16) ಅಗ್ನಿಶಾಮಕ ಇಲಾಖೆ, ವೈಮಾನಿಕ ಇಲಾಖೆ, ಸ್ಥಳೀಯ ಸಂಸ್ಥೆ, ಬೆಸ್ಕಾಂ ಹಾಗೂ ಕೆ.ಎಸ್.ಪಿ.ಸಿ.ಬಿ. ಮಂಡಳಿ/ ಇಲಾಖೆಗಳ ನಿರಾಕ್ಷೇಪಣಾ ಪತ್ರಗಳನ್ನು ಯೋಜನಾ ಪ್ರಾಧಿಕಾರವು ಪಡೆದು ಕಟ್ಟಡ ನಕ್ಷೆ ಮಂಜೂರಾತಿ ನೀಡುವುದು.

17) ಅರ್ಜಿದಾರರು ಉದ್ದೇಶಿಸಿರುವ ಜಮೀನುಗಳಲ್ಲಿ ಸರ್ಕಾರಿ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

18) ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಜಮೀನುಗಳ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ/ದಾಖಲಾತಿ ನೀಡಿದ್ದಲ್ಲಿ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ.

19) ಅಭಿವೃದ್ಧಿ ಯೋಜನೆಯಲ್ಲಿನ ಘನತ್ಯಾಜ್ಯಗಳನ್ನು ಪ್ಲಾಸ್ಟಿಕ್ ಮತ್ತು ಇತ್ಯಾದಿಯಾಗಿ ವಿಂಗಡಿಸಿ, Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

20) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ವಿನ್ಯಾಸದ ಮಲೀನ ನೀರನ್ನು ಬಿಡಬಾರದು. ಸದರಿ ವಸತಿ ವಿನ್ಯಾಸ ನಕ್ಷೆಯಲ್ಲಿ ಸೂಚಿಸಲಾಗಿರುವ ನಾಲಾ ಪ್ರದೇಶಗಳಲ್ಲಿ ರಸ್ತೆ ಪರಿಚಲನೆಯನ್ನು ಮುಂದುವರಿಸುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದು ಕಲ್ವರ್ಟ್ ಕಟ್ಟತಕ್ಕದ್ದು, ಹಾಗೂ ನೀರಿನ ಹರಿವೆಗಾಗಿ ಯಾವುದೇ ಅಡಚಣೆ ಮಾಡತಕ್ಕದ್ದಲ್ಲ, ಹಾಗೂ ಸೂಕ್ತ ಡ್ರೈನೇಜ್ ನಿರ್ಮಿಸಿ ಸಂರಕ್ಷಿಸತಕ್ಕದ್ದು, ಹಾಗೂ ಯಾವುದೇ ಒತ್ತುವರಿ ಮಾಡತ್ತಕ್ಕದ್ದಲ್ಲ. ಸರ್ಕಾರದ ಅಧಿಸೂಚನೆ ಸಂ. ಯುಡಿಡಿ15ಟಿಟಿಪಿ2015, ದಿನಾಂಕ: 21/04/2020 ರ ರೀತ್ಯ ಜಲಪ್ರದೇಶಗಳ ಬಫರ್ ಜಾಗದಲ್ಲಿ water

pumping stations, Walking tracks, Play fields without any building constructions, cycling tracks & Parks ಗಳನ್ನು ಮಾತ್ರ ಅಭಿವೃದ್ಧಿಪಡಿಸತಕ್ಕದ್ದು.

21) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 15(4) ರಂತೆ ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ಸಹಿ/-
**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

**ರವರಿಗೆ,**
ಮೆ॥ ಆರ್ಟಿಸ್ಮೋ, ಭೂಮಾಲೀಕರು ಮತ್ತು
ನೋಂದಾಯಿತ ಪವರ್ ಆಫ್ ಅಟಾರ್ನಿದಾರರು,
(ಭೂಮಾಲಿಕರುಗಳಾದ ಶ್ರೀಮತಿ ಸಿ.ರತ್ನಮ್ಮ, ವಿಜಯಲಕ್ಷ್ಮಿ
ಡಿ.ಎಸ್, ಕೆ.ಲತಾ, ರಾಮಚಂದ್ರ ಎಂ, ಆರ್.ಮಂಜು,
ಆರ್.ಪದ್ಮ, ಪಿ.ಗೋಪಾಲಕೃಷ್ಣ ರವರುಗಳ ಪರವಾಗಿ),
ಮತ್ತು ಶ್ರೀ ಹೇಮಂತ್, ಶ್ರೀ ಸಿ.ಆರ್. ಸುರೇಶ್,
ಶ್ರೀಮತಿ ರತ್ನಮ್ಮ ಕೋಂ ರಾಮಕೃಷ್ಣಪ್ಪ ಮತ್ತು
ಶ್ರೀ ಸಿ.ಎನ್ ಅಶೋಕ್ ಮತ್ತು ಶ್ರೀ ಸಿ.ಎನ್. ರಮೇಶ್,
ಚಿಕ್ಕಜಾಲ ಗ್ರಾಮ, ಜಾಲ ಹೋಬಳಿ,
ಯಲಹಂಕ ತಾಲ್ಲೂಕು.

**ಪ್ರತಿಯನ್ನು :-**

1. ಭೂದಾಖಲೆಗಳ ಸಹಾಯಕ ನಿರ್ದೇಶಕರು, ಯಲಹಂಕ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರಿಗೆ ಅನುಮೋದಿತ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯ ಪ್ರತಿಯನ್ನು ಕಳುಹಿಸಿದ್ದು, ದೃಢೀಕೃತ ಸರ್ವೆ ನಕ್ಷೆಯನ್ವಯ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆಗಾಗಿ ಪರಿಗಣಿಸಲಾಗಿದ್ದು, ದೃಢೀಕೃತ ಸರ್ವೆ ನಕ್ಷೆಯಂತೆ ಅನುಗುಣವಾಗಿ ಇಲ್ಲದಿದ್ದಲ್ಲಿ ಅಥವಾ ಯಾವುದೇ ಸರ್ಕಾರಿ ಜಮೀನು ಒಳಗೊಂಡಿದ್ದಲ್ಲಿ ಈ ಪ್ರಾಧಿಕಾರಕ್ಕೆ ಮಾಹಿತಿ ನೀಡಲು ಹಾಗೂ ಅನುಮೋದನೆ ನೀಡಲಾದ ಅಭಿವೃದ್ಧಿ ನಕ್ಷೆಯಂತೆ ಯಾವುದೇ ಕೆರೆ / ಖರಾಬು ಒತ್ತುವರಿ ಆಗಿಲ್ಲದೇ ಇರುವ ಬಗ್ಗೆ ಮಾಹಿತಿ ನೀಡಲು ಕೋರಿದೆ. ತಮ್ಮ ವತಿಯಿಂದ ಯಾವುದೇ ಮಾಹಿತಿ ಸ್ವೀಕೃತಗೊಂಡಿಲ್ಲದ ಪಕ್ಷದಲ್ಲಿ ದಾಖಲೆಯಂತೆ ವಸತಿ / ವಾಣಿಜ್ಯ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯು ಸರಿಯಾಗಿರುತ್ತದೆ ಎಂದು ತಿಳಿದು ಮುಂದಿನ ಕ್ರಮಕೈಗೊಳ್ಳಲಾಗುವುದೆಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.
2. ಉಪನೋಂದಣಾಧಿಕಾರಿಗಳು, ಚಿಕ್ಕಜಾಲ, ಯಲಹಂಕ ತಾಲ್ಲೂಕು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2 ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ ಕಾಂಪೌಂಡ್, 3 ನೇ ಕ್ರಾಸ್ ಮಿಷನ್ ರಸ್ತೆ, ಬೆಂಗಳೂರು-560027 ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಚಿಕ್ಕಜಾಲ ಗ್ರಾಮ ಪಂಚಾಯಿತಿರವರಿಗೆ ಅನುಮೋದಿತ ವಸತಿ/ವಾಣಿಜ್ಯ ಉಪಯೋಗದ "ಅಭಿವೃದ್ಧಿ ಯೋಜನಾ ನಕ್ಷೆ" ಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
5. ಕಛೇರಿ ಪ್ರತಿ.

12.05.22

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

housiey.com